

ಆಕಾಶದ ನಕ್ಷತ್ರಗಳು ಕರಗಿ ಭೂಮಿಗೆ ಇಳಿಯುತ್ತಿದ್ದವು. ಇವರ ಹಾಡುಗಳನ್ನು ಕೇಳುವಾಗ ಹಾದಿತಪ್ಪಿ ಅಲೆಯುವ ಮನಸ್ಸು ಮರಳಿ ದೇಹದಲ್ಲಿ ಒಂದಾಗುತ್ತದೆ. ನಮ್ಮ ಕೇರಿಯ ಭಜನಾ ತಂಡದ ಶಿಖರ ಇವರು. ಇವರ ಕಂಠದ ಮಾಧುರ್ಯದಿಂದಾಗಿಯೇ ನಮ್ಮ ಕೇರಿಯ ಭಜನೆ ನಾಲ್ಕಾರು ಹಳ್ಳಿಗಳಲ್ಲಿ ಪ್ರಸಿದ್ಧವಾಗಿತ್ತು!

ಖಲಂದರ್ ಸಾಹೇಬರು ನೋಡಲು ತೆಳ್ಳಗಿದ್ದ ವ್ಯಕ್ತಿ. ತಲೆಯ ತುಂಬಾ ಹತ್ತಿಯಂತೆ ಬೆಳ್ಳಗಿದ್ದ ಕೂದಲ ರಾಶಿ. ಕ್ಷೌರ ಮಾಡದ ಮುಖದ ತುಂಬಾ ಸುರಿದ ಹಿಮದಂತೆ ಕಾಣುತ್ತಿದ್ದ ನೀಳವಾಗಿದ್ದ ಗಡ್ಡ, ದೊಗಳೆ ಪೈಜಾಮ, ಉದ್ದನೆಯ ಅಂಗಿ (ಕುರ್ತಾ) ಯಾರನ್ನಾದರೂ ಒಂದು ಗಳಿಗೆ ತನ್ನಡೆಗೆ ಸೆಳೆಯುವಂತಹ ವ್ಯಕ್ತಿತ್ವ ಅವರದು. ತಮ್ಮ ತಂದೆ ಪೀರ್ ಬಾಷಾ ಅವರಂತೆಯೇ ಹಲವು ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಅವರು ದೃಢಚಿತ್ತದ ವ್ಯಕ್ತಿಯಾಗಿದ್ದರು. ತರ್ಕ, ಅತಿಯಾದ ವ್ಯವಹಾರಿಕ ಮಾತುಗಳಿಲ್ಲದೆ ಸರಳತೆ, ಪ್ರಾಮಾಣಿಕತೆಯಿಂದ ಮಾತ್ರ ಬದುಕುತ್ತಿದ್ದ ಅವರು ಅಳಿದಮೇಲೂ ಕೇರಿಯವರಿಗೆ ಅವರ ಕುಟುಂಬದ ಬಗ್ಗೆ ಗೌರವವಿದೆ.

ನಾವು ಆಚರಿಸುತ್ತಿದ್ದ ರಾಮನವಮಿ ಎಂದರೆ, ಅಂದು ರಾಮನ ಫೋಟೊವನ್ನು ಕೊರಳಿಗೆ ನೇತ್ಹಾಕಿಕೊಂಡು, ಭಜನೆ ಮಾಡುತ್ತಾ ಕೇರಿಯ ಎಲ್ಲರ ಮನೆಗಳ ಮುಂದೆ ಮೆರವಣಿಗೆ ಹೊರಟು, ಅಂತಿಮವಾಗಿ ಊರಮುಂದಿನ ರಂಗನಾಥ ಸ್ವಾಮಿಯ ಗುಡಿಗೆ ಬಂದು ಅಲ್ಲಿ ಪೂಜೆಯ ನಂತರ ಎಲ್ಲರಿಗೂ ಹೆಸರುಬೇಳೆ, ಬಾಳೆಹಣ್ಣಿನ ರಸಾಯನ, ಬೆಲ್ಲದ ಪಾನಕವನ್ನು (ಇದನ್ನೇ ನಾವು ಚರ್ಪು ಎಂದು ಕರೆಯುತ್ತಿದ್ದೆವು) ಕೇರಿಯವರಿಗೆಲ್ಲಾ ಹಂಚುವುದರೊಂದಿಗೆ ರಾಮನವಮಿ ಮುಗಿಯುತ್ತಿತ್ತು. ರಾಮನವಮಿಯಂದು ದೇವರ ಮೆರವಣಿಗೆಗಾಗಿ ನನ್ನ ವಾರಿಗೆಯ ಹುಡುಗರು ಅಂದು ಬೆಳಗ್ಗೆಯೇ ಚಿಕ್ಕನರಸಯ್ಯನವರ